ತೂರಾಡ್ತ ಬಂದ ಮಕ್ಕಳ್ನ ನೋಡಿದ ಕೂಡಲೆ ಎಲ್ಲಿತ್ತೊ ಕ್ವಾಪ ಉಕ್ಕಿ ಬಂದಿತ್ತು ಕೆಂಪಿಗೆ "ನಿಮ್ಗಾ ಯಾರಲ್ಲಾ ಯೋಳಿದ್ದು, ಬ್ಯಾರೆ ಯೇನು ಏಳಲಿಲ್ವಾ, ಇಟೋತ್ತು ಎಲ್ಲಿ ಆಳ್ಬಡ್ಕಂಡು ಓಗಿದ್ರೊ, ಮನೆ ಮ್ಯಾಲೆ ಗ್ಯಾನ ಐತೆನ್ರುಲ್ಲ ನಿಮ್ಗೆ. ವತ್ತಾರೆಯಿಂದ ಆಟೆಲ್ಲ ರಾಮಾಯ್ಣ ನಡ್ದೈತೆ, ಎಲ್ಲಿ ಆಳಾಗೋಗಿದ್ರಿ ಸೂಳೆಮಕ್ಕಳ್ರಾ, ಈಗಾ ಬಂದಿದಿರಲ್ಲ, ಮಳ್ಳ್ರಂಗೆ' ಯೆದ್ಯೊಳ್ಗೆ ಇದ್ದ ಸಿಟ್ನೆಲ್ಲ ಕಾರ್ಕೊಂಡಳು.

ಅವಳ ಸಿಟ್ಟು,ಕ್ವಾಪ ಆ ಎಮ್ಮೆ ಚರ್ಮದವ್ಕೆ ತಟ್ಟಲೆ ಇಲ್ಲಾ. "ಎಲ್ಲವ್ವ ಅವ್ವು, ಮದ್ವೆ ಬ್ಯಾಡಾ ಅಂತಿದಳಂತೆ, ಇನ್ಯಾವ ರಾಜಕುಮಾರನ್ನ ಮದ್ವೆ ಮಾಡ್ಕಂತಳೆ ಈ ಸುಪನಾತಿಗಿತ್ತಿ. ಮೊದಲು ತಾಳಿಕಟ್ಟಿಸಿ ಅವಳ್ನ ಮನೆಯಿಂದ ಆಚ್ಗಟ್ಟು. ಕೊಬ್ಬಿ ನಿಂತ್ಕಂಡವ್ಳೆ ಬೋಸುಡಿ" ಬೋರಾಡ ತೊಡಗಿದವು ಕುಡುಕು ಮುಂಡೇವು. ಕ್ವಾಣೆಯೊಳಗೆ ಕುಂತು ಕಣ್ಣೀರಾಕ್ತ ಇದ್ದ ಸಣ್ಣೀ ಅಡ್ನಾಡಿ ಅಣ್ಣಂದಿರ ಮಾತ್ನ ಕೇಳಿ ಆವೇಸದಿಂದ ಹೊರಕೆ ಬಂದವ್ಳೇ "ಯಾಕಿರ್ಲಾ, ನೀವೇನು ನನ್ನ ಸಾಕ್ತಾ ಇದ್ದೀರಾ, ಈ ಮನೆಲಿ ನಿಮ್ಗೆಟು ಅಕ್ಕೈತೋ ನಂಗೂ ಅಟೇ ಐತೇ. ನನ್ನ ಕಳ್ಸಾಕೆ ನೋಡ್ತಿರಾ, ನಾ ಹೋಗಕಿಲ್ಲ, ಈ ಮದ್ವೆನೂ ಮಾಡ್ಕಳಕಿಲ್ಲ, ಯೋನು ಮಾಡ್ತಿರೊ" ಕೊಂಚ ಪೌರುಷದಿಂದಲೇ ಅಣ್ಣಂದಿರ ಮುಂದೆ ಬಂದು ನಿಂತ್ಕಂಡ್ಲು.

''ಏನಲೆ ಬೋಸುಡಿ, ನಮ್ಮಂದೆನೇ ನಿಂತ್ಕಂಡ್ಮಾತಾಡ್ತೀಯಾ, ಆ ಕುಂಟಂಗೆ ನಿನ್ನ ಕಟ್ದೆ ಓದ್ರೆ ನನ್ನ ಎಸ್ರೆನೇ ಬದ್ಲಾಯಿಸ್ಕಂಡು ಬುಡ್ತಿನಿ. ಅದೆಂಗೆ ನೀನು ಮದ್ವೆ ಮಾಡ್ಕಳಕಿಲ್ವೊ ನೋಡ್ಕೊತಿವಿ ಕಣೆ'' ಅಂತ ಧಮಕಿ ಹಾಕಿದ ಈರಭದ್ರ. ಅವನ ಜೊತೆ ಅವನ ತಮ್ಮ ವೆಂಕಟ್ನೂ ಹ್ಞೂಂಕರಿಸಿದ.

''ಬೋ ದೊಡ್ಡ ಮನುಸ್ರು ನೀವು. ನೀವೆಲ್ಡಂಗ್ ಕೇಳ್ಬೇಕಾ. ಗಂಡಿನ್ಕಡೆಯವ್ರು ಏಟು ಅಣ ಕುಡ್ಯಾಕೆ ಕೊಡ್ತಿನಿ ಅಂದವ್ರೆ, ನಿಮ್ಮ ಅಣೆಬರಾ ನಂಗೆ ಗೊತ್ತಿಲ್ವಾ. ಹೋಗ್ರಾ ಮೂಢಾತ್ಮಗಳಾ, ನಾನು ಯಾವನ್ನೂ ಮದ್ವೆ ಮಾಡ್ಕಾಳಾಕಿಲ್ಲ, ಅಂಗಂತ ಆ ಗಂಡಿನ್ಕಡೆಯವ್ರಿಗೆ ಯೋಳಿಬಿಡಿ'' ಎಂದು ಕಡ್ಡಿ ತುಂಡಾದಂತೆ ಹೇಳಿ ಯಾರಿಗೂ ಮುಂದೆ ಮಾತನಾಡಲು ಅವಕಾಶ ಕೊಡದಂತೆ ಒಳಗೆ ಹೋಗಿ ಬಿಟ್ಟಳು. ಅವಳ ಹಟ, ಛಲ ಗೊತ್ತಿದ್ದ ಅವ್ವೆ ಮುಂದೇನು ಮಾಡಬೇಕೊ ತಿಳಿಯದೆ 'ಈ ಮುಂಡೆಗೆನಾಯ್ತೆ, ಯಾವ ಮಿಂಡ ಸಿಕ್ಕವ್ನಂತೆ, ಅಂಗೆನಾದ್ರೂ ಇದ್ರೆ ಏಳೇಬೋಸುಡಿ, ನಿನ್ನ ಕತ್ರಸಾಕಿ ಬುಡ್ತಿವಿ, ಮಾರಿ ಮುಂಡೆ' ತಂಗಿನಾ ಬೈಯ್ದ ಕೊಳ್ಳುತ್ತಾ, ಅವ್ವನ ಕಡೀಕೆ ತಿರುಗಿ ''ನಾವು ಏಳ್ದಂಗೆ ಕೇಳ್ದೆ ವೋದ್ರೆ ಕೈ ಕಾಲು ಕಟ್ಟಾಕಿ ತಾಳಿ ಕಟ್ಸನಾ ಕನವ್ವ, ನೀಯ್ಯಾನು ಚಿಂತೆ ಮಾಡ್ಬೇಡ ಕನವ್ವ" ತಲೆ ಮೇಲೆ ಕೈ ಹೊತ್ತು ಕುಳಿತಿದ್ದ ಕೆಂಪಿಗೆ ಅಬಯ ನೀಡಿದ್ವು ಕುಡುಕು ಮುಂಡೆವು. ಈಗಾಗ್ಲೆ ತಂಗಿನಾ ಅವನಿಗೆ ಕೊಟ್ಟು ಮದ್ವೆ ಮಾಡ್ತಿವಿ ಅಂತ ಇಸ್ಕೊಂಡಿದ್ದ ದುಡ್ಡೆಲ್ಲಾ ಹೆಂಡಾ, ಬಾಡು ಅಂತೆಲ್ಲಾ ಖರ್ಚಾಗಿ ಹೋಗಿತ್ತು. ಇನ್ನು ವಂದಿಷ್ಟು ಇಸ್ಕೋಳ್ಳೊಣ ಅಂತ ಅಂದುಕೊಂಡಿರುವಾಗಲೆ ಈ ಸುಪ್ಪನಾತಿ ಮದ್ವೆನೆ ಬ್ಯಾಡಾ ಅಂತಿದ್ದಾಳೆ. ಏನಪ್ಪಾ ಮಾಡೋದೋ, ಈ ಮದ್ವೆ ನಡೆಯಂಗಿಲ್ಲ ಅಂದ್ರೆ ಅವ್ರು ಸುಮ್ನೆ ಬಿಟ್ಟಾರಾ ನಮ್ಮನಾ. ಈ ಸಣ್ಣಿಮುಂಡೆನೊ ಮೊದಲೆ ಹಟ್ಮಾರಿ. ತನಗೆ ಒಂದ್ಸಲ ಬ್ಯಾಡಾ ಅಂದ್ಮಾಕೆ ಯ್ಯಾರ ಮಾತ್ನೂ ಕೇಳೊಳಲ್ಲ, ಯಾರ್ಗೂ ಹೆದರೋಳಲ್ಲ, ಇವಳ್ನ ನಂಬಿಕೊಂಡು ಮದುವೆ ವ್ಯವಾರಕ್ಕೆ ಕೈ ಆಕಿದ್ವಲ್ಲ. ಈಗ ಎಲ್ಲ ಉಲ್ಟ ಒಡೀತಾ ಈತಲ್ಲಪ್ಪ. ಕೈ ತುಂಬಾ ಹಣ, ಶ್ರೀಮಂತರ ಸಂಬಂಧ, ಮುಂದೆ ನಮ್ಮ ಕಷ್ಟಗಳಿಗೆ ಕೈ ಹಿಡಿಯೋ ನೆಂಟಸ್ತನ ಸಿಕ್ಕೈತೆ ಅಂತ ಬೀಗ್ತ ಇರುವಾಗಲೆ ಇಂಗಾಗೋಯ್ತುಲ್ಲಪ್ಪ. ತಾನೆ ನಿಂತ್ಕಂಡು ಮಗ್ಳ ಮದ್ವೆ ಮಾಡ್ಬೇಕಾದ ಈ ಅಪ್ಪ ಅನ್ನಸ್ಕೊಂಡವ್ನುನೇ ಮಗ್ಳಿಗೆ ಯೋಳಿಕೊಟ್ಟು ಮದ್ವೆ ನಿಲ್ಸಕೊಂಟವ್ನಲ್ಲ, ಆ ಬೋಳಿ ಮಗಂಗೆ ಯಾತರಲ್ಲಿ ವಡಿಬೇಕು, ಅಪ್ಪನಾ ಇವ್ನು, ವೊಟ್ಟೆಲಿ